# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 987 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಕೆ.ಎಸ್.ನವೀನ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 22-02-2024 |
| **ಉತ್ತರಿಸುವ ಸಚಿವರು** | : | ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| **ಅ)** | ಚಿತ್ರದುರ್ಗದ ಕೋಟೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಯೋಜನೆಗಳೇನಾದರೂ ಸರ್ಕಾರದ ಮುಂದಿದೆಯೇ ; | ಹೌದು.<br><br>ಚಿತ್ರದುರ್ಗ ಕೋಟೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರ ಹಾಗೂ ಗಣಿಬಾಧಿತ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ "COMPREHENSIVE ENVIRONMENT PLAN FOR MINING IMPACT ZONE (CEPMIZ)") ಯೋಜನೆಯಡಿಯಲ್ಲಿ ಪ್ರಸ್ತಾಪಿಸಿ ಕರ್ನಾಟಕ ಗಣಿಗಾರಿಕೆ ಪರಿಸರ ಪುನಃ ಸ್ಥಾಪನೆ ನಿಗಮ (KMERC)ರವರಿಗೆ ಈಗಾಗಲೇ ಅನುಮೋದನೆಗಾಗಿ ಸಲ್ಲಿಸಿರುವ ವಿವಿಧ ಪ್ರವಾಸಿ ಸೌಲಭ್ಯಗಳ ವಿವರಗಳನ್ನು **ಅನುಬಂಧ-1 ರಲ್ಲಿ** ಒದಗಿಸಿದೆ. |
| **ಆ)** | ಎ.ಎಸ್.ಐ. ಮತ್ತು ಪ್ರವಾಸೋದ್ಯಮ ಮಟ್ಟದಲ್ಲಿ ಯೋಜನೆ ಸಮನ್ವಯ ಕುರಿತು ಅಧಿಕಾರಿಗಳ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಭೆ ನಡೆಸಲಾಗುತ್ತಿದೆಯೇ ; | ಹೌದು.<br><br>ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಚಿತ್ರದುರ್ಗ ರವರ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲೆ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆಗೆ ಎ.ಎಸ್.ಐ ಮತ್ತು ಪ್ರವಾಸೋದ್ಯಮ ಇಲಾಖೆಯ ಯೋಜನೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಜಿಲ್ಲಾ ಮಟ್ಟದ ಸಭೆಯನ್ನು ನಡೆಸಿ ಕಾಲಕಾಲಕ್ಕೆ ಚರ್ಚಿಸಲಾಗುತ್ತಿದೆ. |
| **ಇ)** | ಪ್ರವಾಸೋದ್ಯಮ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; ಪ್ರವಾಸೋದ್ಯಮ ಇಲಾಖೆಗೆ ವಾರ್ಷಿಕವಾಗಿ ಬರುವ ಆದಾಯ ಎಷ್ಟು ? | ಪ್ರವಾಸೋದ್ಯಮ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ವಿವರ:<br><br>**1) <u>ಪ್ರವಾಸೋದ್ಯಮ ನಿರ್ದೇಶನಾಲಯ:</u>** |

| ಕ್ರಮ ಸಂಖ್ಯೆ | ವೃಂದ | ಖಾಲಿಯಿರುವ ಹುದ್ದೆಗಳ ವಿವರ |
|---|---|---|
| 1 | ಗ್ರೂಪ್ ಎ | 2 |
| 2 | ಗ್ರೂಪ್ ಬಿ | 5 |
| 3 | ಗ್ರೂಪ್ ಸಿ | 74 |
| 4 | ಗ್ರೂಪ್ ಡಿ | 13 |
| | **ಒಟ್ಟು** | **94** |

2) **ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ:**

| ಕ್ರಮ ಸಂಖ್ಯೆ | ವೃಂದ | ಖಾಲಿಯಿರುವ ಹುದ್ದೆಗಳ ವಿವರ |
|---|---|---|
| 1 | ಗ್ರೂಪ್ ಎ | 4 |
| 2 | ಗ್ರೂಪ್ ಬಿ | 5 |
| 3 | ಗ್ರೂಪ್ ಸಿ | 47 |
| 4 | ಗ್ರೂಪ್ ಡಿ | 89 |
| | **ಒಟ್ಟು** | **145** |

ಪ್ರವಾಸೋದ್ಯಮ ಇಲಾಖೆಯು ಮೂಲತಃ ಒಂದು ಸೇವಾ ಆಧಾರಿತ ಇಲಾಖೆಯಾಗಿರುತ್ತದೆ. ಈ ಇಲಾಖೆಯು ನೇರವಾಗಿ ಯಾವುದೇ ಆದಾಯವನ್ನು ಗಳಿಸುವುದಿಲ್ಲ. ಬದಲಾಗಿ ರಾಜ್ಯ ಸರ್ಕಾರಕ್ಕೆ ಸಾರ್ವಜನಿಕರು ಮಾಡುವ ಪ್ರವಾಸದಿಂದ ಸಾರಿಗೆ, ಇಂಧನ, ಹೋಟೆಲ್ ಉದ್ದಿಮೆಗಳು, ಇತ್ಯಾದಿಗಳ ಮೂಲಕ ಆದಾಯವು ಸರ್ಕಾರಕ್ಕೆ ಬರುತ್ತದೆ.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ 2022-23ನೇ ಸಾಲಿನಲ್ಲಿ ಈ ಕೆಳಕಂಡ ಮೂಲಗಳಿಂದ ರೂ.20,40,259/- ಗಳ ಆದಾಯವು ಸ್ವೀಕೃತವಾಗಿದೆ.

| ಕ್ರ. ಸಂ. | ವಿವರಗಳು | 2022-23ನೇ ಸಾಲಿಗೆ (ರೂ.ಗಳು) |
|---|---|---|
| 1 | ವಸ್ತುಸಂಗ್ರಹಾಲಯಗಳ ಪ್ರವೇಶ ಶುಲ್ಕ | 13,65,201/- |
| 2 | ಪುಸ್ತಕಗಳ ಮಾರಾಟದಿಂದ | 2,90,742/- |
| 3 | ಸ್ಮಾರಕದ ಬಳಿ ಚಿತ್ರೀಕರಣದ ಶುಲ್ಕ | 36,300/- |
| 4 | ಪಾರ್ಕಿಂಗ್ ಶುಲ್ಕ | 3,46,016/- |
| 5 | ಮಾಹಿತಿ ಹಕ್ಕು ಅಧಿನಿಯಮದ ಶುಲ್ಕ | 2,000/- |
| | **ಒಟ್ಟು** | **20,40,259/-** |

TOR 93 TDV 2024

(ಎಚ್.ಕೆ.ಪಾಟೀಲ)
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 987 ಕ್ಕೆ ಅನುಬಂಧ – 1**

2018-19ನೇ ಸಾಲಿನಲ್ಲಿ ಚಿತ್ರದುರ್ಗದಲ್ಲಿ ಕೋಟೆಯ ಮುಂಭಾಗದಲ್ಲಿರುವ ಇಲಾಖಾ ಜಮೀನಿನಲ್ಲಿ ಪ್ರವಾಸಿ ಮಾಹಿತಿ ಕೇಂದ್ರ, ಪಾರ್ಕಿಂಗ್ ಸೌಲಭ್ಯ, ಲಗೇಜ್ ಕೊಠಡಿ, ಕುಡಿಯುವ ನೀರಿನ ಸೌಲಭ್ಯ, ಪ್ರವಾಸಿಗರಿಗೆ ವಿಶ್ರಾಂತಿ ಸೌಲಭ್ಯಗಳ ನಿರ್ಮಾಣ ಕಾಮಗಾರಿಯನ್ನು ರೂ.200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿರುತ್ತದೆ. ಸದರಿ ಕಾಮಗಾರಿಗೆ ಪೂರ್ಣ ಅನುದಾನ ಬಿಡುಗಡೆ ಮಾಡಲಾಗಿದೆ, ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ.

ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಗಣಿ ಬಾಧಿತ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ "Comprehensive Environment Plan for Mining Impact Zone (CEPMIZ)") ಯೋಜನೆಯಡಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಗಣಿಬಾಧಿತ ಪ್ರದೇಶದ ಚಿತ್ರದುರ್ಗ ಕೋಟೆ ಹಾಗೂ ಚಂದ್ರವಳ್ಳಿ ಪ್ರದೇಶವನ್ನು ವಿವಿದ ಪ್ರವಾಸೋದ್ಯಮ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಪ್ರಸ್ತಾವನೆಯನ್ನು ಕರ್ನಾಟಕ ಗಣಿಗಾರಿಕೆ ಪರಿಸರ ಪುನಃಸ್ಥಾಪನೆ ನಿಗಮ (KMERC) ರವರಿಗೆ ಈಗಾಗಲೇ ಅನುಮೋದನೆಗಾಗಿ ಸಲ್ಲಿಸಲಾಗಿದೆ. ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ಪ್ರಸ್ತಾಪಿಸಿರುವ ಯೋಜನೆಗಳ ವಿವರ |
|---|---|
| 1. | ಚಿತ್ರದುರ್ಗ ಕೋಟೆಯಲ್ಲಿ ಧ್ವನಿ ಮತ್ತು ವರ್ಣರಂಜಿತ ಬೆಳಕಿನ ಪ್ರದರ್ಶನ ವ್ಯವಸ್ಥೆ ಮಾಡುವುದು. |
| 2. | ಚಿತ್ರದುರ್ಗ ಕೋಟೆಯ ಪ್ರವೇಶ ದ್ವಾರದ ಎಡಭಾಗದಲ್ಲಿ ಮಕ್ಕಳ ಉದ್ಯಾನವನ್ನು ನಿರ್ಮಿಸುವುದು. |
| 3 | ಚಿತ್ರದುರ್ಗ ಕೋಟೆಯ ಅಕ್ಕ-ತಂಗಿ ಹೊಂಡದ ಬಳಿ ನೀರಿನ ಕಾರಂಜಿಯನ್ನು ನಿರ್ಮಿಸುವುದು. |
| 4 | ಚಂದ್ರವಳ್ಳಿ ಉಧ್ಯಾನವನದಿಂದ ಹನುಮನ ಬಾಗಿಲು (ಒನಕೆ ಓಬವ್ವನ ಕಿಂಡಿ) ವರೆಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ನಿರ್ಮಿಸುವುದು. |
| 5 | ಚಂದ್ರವಳ್ಳಿ ಕೆರೆಯ ಸುತ್ತ ಪಾದಾಚಾರಿ ಮಾರ್ಗವನ್ನು ಅಭಿವೃದ್ಧಿಪಡಿಸುವುದು, ಲೈಟಿಂಗ್, ಬೋಟಿಂಗ್ ವ್ಯವಸ್ಥೆಯನ್ನು ಕಲ್ಪಿಸುವುದು. |
| 6 | ಚಂದ್ರವಳ್ಳಿ ಉಧ್ಯಾನವನದಲ್ಲಿ ಶುದ್ಧ ನೀರಿನ ಘಟಕಗಳನ್ನು ನಿರ್ಮಿಸುವುದು. |
| 7 | ಚಂದ್ರವಳ್ಳಿ ಉಧ್ಯಾನವನದ ಹತ್ತಿರ ವಾಹನ ನಿಲುಗಡೆ ವ್ಯವಸ್ಥೆಯನ್ನು ನಿರ್ಮಿಸುವುದು. |
| 8 | ಚಂದ್ರವಳ್ಳಿ ಗುಹೆಯ ಒಳ ಭಾಗದಲ್ಲಿ ಬೆಳಕಿನ ವ್ಯವಸ್ಥೆಯನ್ನು ನಿರ್ಮಿಸುವುದು. |
| 9 | ಚಂದ್ರವಳ್ಳಿ ಉಧ್ಯಾನವನದ ಸುತ್ತ ಮಕ್ಕಳಿಗಾಗಿ ಮನರಂಜನಾ ರೈಲು ವ್ಯವಸ್ಥೆ ಮಾಡುವುದು. |
| 10 | ಚಂದ್ರವಳ್ಳಿ ಪ್ರವೇಶ ದ್ವಾರದಿಂದ ದವಳಪ್ಪನ ಗುಡ್ಡದವರೆಗೆ ಪ್ರಸ್ತುತ ಇರುವ ಪಾದಚಾರಿ ಮಾರ್ಗದಲ್ಲಿ ಸೂಕ್ತ ಬೆಳಕಿನ ವ್ಯವಸ್ಥೆಯನ್ನು ಕಲ್ಪಿಸುವುದು. |
| 11 | ಚಂದ್ರವಳ್ಳಿ ತೋಟಕ್ಕೆ ಆಕರ್ಷಿಕ ಪ್ರವೇಶದ್ವಾರವನ್ನು ನಿರ್ಮಿಸುವುದು ಹಾಗೂ ನೂತನವಾದ ಕೇಫೇಟೇರಿಯವನ್ನು ನಿರ್ಮಿಸುವುದು. |

**********